ತಗೊಂಡ್ರೆ, ಇವ ಉದ್ಧಾರ ಆದ ಹಾಗೆಯೇ. ಮೆಡಿಕಲ್ ಎಂಜಿನಿಯರಿಂಗ್ ಸೀಟ್ ಸಿಗೋದು ಬಿಡು... ಇಂವ ಡಿಪ್ಲೊಮಾಕ್ಕೂ ನಾಲಾಯಕ್ ಆಗ್ತಾನೆ."

ಗಂಡ ಹೆಂಡತಿಯರ ವಾದ ಹೀಗೆ ಕೆಲವೊಮ್ಮೆ ಬೆಳೆಯುತ್ತಿದ್ದರೆ, ಇದೇ ಸುಸಂದರ್ಭ ಎಂದು ಕೌಶಿಕ ಅವರಿಬ್ಬರನ್ನು ಹಾಗೆಯೇ ಮಿಕಿ ಮಿಕಿ ನೋಡುತ್ತಾ ಹಾಗೇ... ಅಲ್ಲೇ ಮಲಗಿ ಬಿಡುತ್ತಿದ್ದುದೂ ಉಂಟು. ಹೀಗೆ ಬರಿ ಹೊಟ್ಟೆಯಲ್ಲಿ ಮಲಗಿದ ಮಗು ನಂತರದಲ್ಲಿ ಮಗ್ಗಿಯ ಭಯದಲ್ಲಿ ಊಟಕ್ಕೇಳದಿದ್ದಾಗ, ತಾಯಿ ಕುಮುದಳು ಮಗುವಿನ ಖಾಲಿ ಹೊಟ್ಟೆಯ ಬಗ್ಗೆ ಪರಿತಪಿಸುತ್ತಾ... ಅಳುತ್ತಾ... ಆಕೆಯೂ ಬರಿ ಹೊಟ್ಟೆಯಲ್ಲೇ ಮಲಗಿದ್ದ ದಿನಗಳು ಹಲವು.

ಅತ್ತ ಆಫೀಸು ಮುಗಿಸಿ, ದಿನವೂ ಬೆಂಗಳೂರು ಟ್ರಾಫಿಕ್‌ನಲ್ಲಿ ಹೈರಾಣಾಗಿ... ಮುಸ್ಸಂಜೆ ಬಲಿತು ಕತ್ತಲಾಗುತ್ತಿದ್ದಂತೆ ಮನೆ ಸೇರುತ್ತಿದ್ದ ಅಪ್ಪ ಅಕ್ಷಯಕುಮಾರ, ಅಪ್ಪರ್ ಕೇಜಿಯ ಮಗುವನ್ನು ಮಗ್ಗಿಯಲ್ಲೊ, ಗಣಿತದಲ್ಲೊ 'ಪ್ರವೀಣ'ನನ್ನಾಗಿ ಮಾಡಬೇಕೆಂದು ಇನ್ನಿಲ್ಲದಂತೆ ಪ್ರಯತ್ನಿಸುತ್ತಿರುವಾಗ, ಇತ್ತ ಕೌಶಿಕನು ಶಾಲೆಯ ದಿನದ ಪುಸ್ತಕಗಳಲ್ಲಿ ಮಾತ್ರವಲ್ಲದೇ ಉತ್ತರಪತ್ರಿಕೆಯಲ್ಲೂ 'ಹೊಸ ಪ್ರಯೋಗ'ವನ್ನು ಶುರು ಮಾಡಿದ್ದ! ಗಣಿತದ ಕೂಡುವ, ಕಳೆಯುವ ಎಲ್ಲಾ ಉತ್ತರಗಳ ಮುಂದೆ ಮಾತ್ರವಲ್ಲದೆ, ಮಗ್ಗಿಯ ಉತ್ತರಕ್ಕೂ ಕೂಡ ಒಂದು 'ಸೊನ್ನೆ' ಸೇರಿಸುವುದೇ ತನ್ನ 'ಈ ಕಲಿಕೆಯ ಉದ್ದೇಶ' ಎಂಬಂತೆ, 'ಒಂದು ಸೊನ್ನೆಯನ್ನು ಜಬರ್ದಸ್ತಾಗಿ ಸೇರಿಸುವ' ವಿಚಿತ್ರ ನಡೆವಳಿಕೆಯನ್ನು ತೋರಿಸಲಾರಂಭಿಸಿದ್ದ. ಕ್ಲಾಸಲ್ಲಿ ಮಿಸ್ಸು 'ಯಾಕಪ್ಪಾ ಹಾಗೆ ಬರಿತೀಯ' ಎಂದು ಕೇಳಿದರೆ, 'ಹಾಗೆ ಸುಮ್ಮನೆ...' ಎಂದು ನಿರ್ಲಿಪ್ತತೆಯಿಂದ ಹೇಳುತ್ತಿದ್ದನಂತೆ. 'ಬರಿಬಾರ್ದು ಹಾಗೆಲ್ಲ... ಉತ್ತರ ಮಾತ್ರ ಬರಿಬೇಕು' ಎಂದು ಮಿಸ್ ಹೇಳಿದರೆ, 'ಸೊನ್ನೆ ತುಂಬ ಚೆಂದ' ಎಂದು ಅನ್ನುತ್ತಿದ್ದನಂತೆ. ಕ್ಲಾಸ್ ಮಿಸ್‌ಗೆ ಈ 'ಸೊನ್ನೆಯ ಕಾಟವನ್ನು' ಪರಿಹರಿಸಲು ಸಾಧ್ಯವಾಗದಾಗ ಆಕೆ ನೇರವಾಗಿ ತಾಯಿ ಕುಮುದಳಿಗೆ ವರದಿಯನ್ನು ಒಪ್ಪಿಸಿದ್ದಳು. ಮನೆಯಲ್ಲಿ ಅಮ್ಮ ಆತನನ್ನು ಮುದ್ದು ಮಾಡುತ್ತಾ, 'ಸೊನ್ನೆ ಯಾಕಪ್ಪಾ ಸೇರಿಸ್ತೀಯ ಅಪ್ಪೂ?...' ಅಂತ ಕೇಳಿದ್ರೆ, 'ಸೊನ್ನೆ ಅಂದರೆ ನಂಗೆ ತುಂಬಾ ಇಷ್ಟ ಅಮ್ಮ...' ಎಂಬ ಉತ್ತರವೇ ಸಿಕ್ಕಿತ್ತು. ತನ್ನ ಮಗನಿಗೆ ಕಲಿಕೆಯ ಒತ್ತಡದಲ್ಲಿ ಗಣಿತದ ಭಾರವನ್ನು ಹೊರಲಾಗುತ್ತಿಲ್ಲ ಎಂಬ ಸತ್ಯ ಕುಮುದಳಿಗೆ ತಿಳಿಯುತ್ತಿದ್ದರೂ... ಆಕೆಗೆ ಆತನನ್ನು ಆ ಒತ್ತಡದಿಂದ ಹೊರತರುವ ದಾರಿಯೇ ತೋಚುತ್ತಿಲ್ಲ ! ಬಾರೊಲೆಗೆ ಬಿದ್ದ ಬದನೆಯ ಸ್ಥಿತಿಯಾಗಿತ್ತು ಆಕೆಯದ್ದು.

ಅಪ್ಪರ್ ಕೇಜಿಯ ಕೊನೆ ಕೊನೆಯಲ್ಲಿ... ಕೌಶಿಕ ಈ 'ಸೊನ್ನೆ ರೋಗವನ್ನು' ಅಥವಾ 'ಸೊನ್ನೆಯ ಮೋಹ'ವನ್ನು ತನ್ನ 'ಮಿಸ್ಸ್' ಎದುರು ಪ್ರಕಟಗೊಳಿಸಲಾರಂಭಿಸಿದ್ದರಿಂದ, ಆತನ ಟೀಚರ್ ಈ ವಿಚಾರವನ್ನು ಅಪ್ಪ ಅಕ್ಷಯಕುಮಾರನಿಗೆ ತಿಳಿಸದೆ ತಾಯಿ ಕುಮುದಳಿಗೆ ಮಾತ್ರವೇ ತಿಳಿಸಿದ್ದಳು. ಮಗನ ದೂರು ಕೇಳಿಸಿಕೊಂಡೊಡನೆ ತಟ್ಟನೆ ಹನಿಗಣ್ಣಾದ ಕುಮುದ, ಕೌಶಿಕನ ಟೀಚರ್ ಜೊತೆ ತನ್ನ ಗಂಡನಲ್ಲಿರುವ ಇನ್ನಿಲ್ಲದಂತಹ 'ಗಣಿತದ ವ್ಯಾಮೋಹ'ವನ್ನು ಹಾಗೂ ತನ್ನ ಮಗ ಮೆಡಿಕಲ್ಲೋ, ಎಂಜಿನಿಯರಿಂಗೊ ಕಲಿಯಲೇಬೇಕೆಂದು ಆತ ಇಟ್ಟುಕೊಂಡಿರುವಂತಹ ಗುರಿಯನ್ನು ಹೇಳುತ್ತಲೇ, ಕೌಶಿಕನಿಗೆ ಗಣಿತ ಹಾಗೂ ಮಗ್ಗಿಯ ಮೇಲಿರುವ ಭಯವನ್ನು ಕಣ್ಣೀರು ಜಿನುಗಿಕೊಂಡೇ ಹೇಳಿಕೊಂಡಿದ್ದಳು. 'ತಾನು ಅವನನ್ನು ನಿಧಾನಕ್ಕೆ ರಿಪೇರಿ ಮಾಡಿಯೇ ಮಾಡುತ್ತೇನೆ; ದಯಮಾಡಿ ಇದನ್ನು ಅವನಪ್ಪನಲ್ಲಿ ಹೇಳುದು ಬೇಡ ಈ ಸಲ ಒಂದು ಬಾರಿ ಈ ಮಗುವನ್ನು ನರ್ಸರಿಯಿಂದ ಮೇಲೆ ದಾಟಿಸಿ' ಎಂದು ಆಕೆ ಟೀಚರ್ ಮುಂದೆ ಭಿನ್ನವಿಸಿಕೊಂಡಿದ್ದಳು.